ಆ) ವಾಗ್ದಾರಿ ರಿಬ್ಬನ್‌ಪಲ್ಲಿ ರಸ್ತೆ ಸೇಡಂ ಕ್ಷೇತ್ರದಲ್ಲಿ ಇಲ್ಲಿಯವರೆವಿಗೂ ಡಾಂಬರೀಕರಣ ರಿಪೇರಿ ಮಾಡಿರುವ ಕಿ.ಮೀ ಎಷ್ಟು; ಇದಕ್ಕೆ ಖರ್ಚಾಗಿರುವ ಹಣವೆಷ್ಟು; ಕಿ.ಮೀ. ವಾರು;

ಇ) 3-4 ತಿಂಗಳಿನಿಂದ ಈ ರಸ್ತೆ ರಿಪೇರಿ ಮಂದಗತಿಯಲಿ ನಡೆದು ಕೆಲಸವಾಗಿಲ್ಲವೇಕೆ?

ಈ) ಈ ಕಳಪೆ ದರ್ಜೆ ಕೆಲಸ ಮಾಡಿರುವ ಅಧಿಕಾರಿಗಳ ಮೇಲೆ ಕೈಗೊಳ್ಳುವ ಕ್ರಮವೇನು; ಇದನ್ನು ಸರಿಪಡಿಸಿ ಮತ್ತು ಈ ರಸ್ತೆಯ ಕೆಲಸವನ್ನು ಪೂರ್ತಿ ಮಾಡುವುದು ಎಂದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ರಸ್ತೆಯ ಹಲವೆಡೆ ತಗ್ಗು ಹಾಗೂ ಕೊರಕಲು ಬಿದ್ದ ಪ್ರದೇಶವನ್ನು ಸರಿಯಾದ ಆಕಾರದಲ್ಲಿ ಕಟ್ ಮಾಡಿ, ಸರಿಯಾಗಿ ರಿಪೇರಿ ಮಾಡಲಾಗುತ್ತಿದೆ.

ಆ) ವಾಗ್ದಾರಿ ರಿಬ್ಬನ್‌ಪಲ್ಲಿ ರಸ್ತೆ ಸೇಡಂ ಕ್ಷೇತ್ರದಲ್ಲಿ 49ಕಿ.ಮೀ ಉದ್ದವಿದ್ದು, 1999-2000 ಸಾಲಿನಲ್ಲಿ 18 ಕಿ.ಮೀ ದುರಸ್ತಿ ಮಾಡಿದ್ದು, 4.62 ಲಕ್ಷ ರೂ. ವೆಚ್ಚವಾಗಿದೆ.

ಇ) ರಸ್ತೆಯಲ್ಲಿ ಕೊರಕಲುಗಳು ಬಿದ್ದಿರುವುದರಿಂದ ಅವುಗಳನ್ನು ತುಂಬಿ ರಸ್ತೆಯ ಮೇಲ್ಮೈಗೆ ಸರಿಯಾಗಿ ಹೊಂದುವಂತೆ ದುರಸ್ತಿ ಬೇಕಾಗಿರುವುದರಿಂದ ಹೆಚ್ಚಿಗೆ ಸಮಯ ಹಿಡಿಯುತ್ತದೆ.

ಈ) ಉದ್ಭವಿಸುವುದಿಲ್ಲ.

ಮಳೆಗಾಲಕ್ಕಿಂತ ಪೂರ್ವದಲ್ಲಿ ಕೆಲಸವನ್ನು ಮುಗಿಸಲಾಗುವುದು.

ಪಶುಸಂಗೋಪನಾ ತಳಿ ಫಾರ್ಮಗಳ ಅಭಿವೃದ್ಧಿ.

2097(2694)

ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ(ಧಾರವಾಡ): ಮಾನ್ಯ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇರುವ ತಳಿ ಫಾರ್ಮಗಳ ಸಂಖ್ಯೆ ಎಷ್ಟು?

ಆ) ಯಾವ ಯಾವ ಫಾರ್ಮಗಳಲ್ಲಿ ಯಾವ ಯಾವ ತರಹದ ತಳಿಗಳಿವೆ;

ಇ) ಉತ್ತಮ ತಳಿಯ ಹಸು ಮತ್ತು ಹೋರಿಗಳನ್ನು 1996-97, 1997-98, 1998-99 ರಲ್ಲಿ ವಿತರಿಸಲಾಗಿದೆಯೇ?

ಈ) ವಿವಿಧ ತಳಿ ಫಾರ್ಮಗಳಲ್ಲಿರುವ ತಳಿಗಳ ಸಂಖ್ಯೆ ಎಷ್ಟು?

ಉ) ರಾಜ್ಯದಲ್ಲಿ ಉತ್ತಮ ತಳಿ ಅಭಿವೃದ್ಧಿ ಹಾಗೂ ಹಂಚಿಕೆಗಾಗಿ ಸರ್ಕಾರ ಹಾಕಿಕೊಂಡ ವಿವಿಧ ಯೋಜನೆಗಳು ಯಾವುವು?

ಶ್ರೀ ಎ.ಕೃಷ್ಣಪ್ಪ(ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು):

ಅ) 11.

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಹಸುಗಳನ್ನು ವಿತರಿಸಲಾಗುವುದಿಲ್ಲ ಆದರೆ ಹೋರಿ ಕರುಗಳನ್ನು ವಿತರಿಸಲಾಗುತ್ತಿದೆ.

1996-97	-	205
1997-98	-	149
1998-99	-	276

ಈ) 8. ಹಳ್ಳಿಕಾರ್, ಅಮೃತ್ ಮಹಲ್, ಖಿಲ್ಲಾರ್, ದೇವಣಿ, ಜರ್ಸಿ, ಹೆಚ್ಎಫ್, ಸುರ್ತಿ ಮತ್ತು ಜಮುನಾಪಾರಿ.

ಉ) 1) ಘನೀಕೃತ ವೀರ್ಯತಂತ್ರಜ್ಞಾನ ವಿಸ್ತರಣೆ(ಕೇಂದ್ರ ವಲಯ)

2) ಜಾನುವಾರು ಕ್ಷೇತ್ರಗಳ ಬಲವರ್ಧನೆ(ರಾಜ್ಯವಲಯ)

3) ಅಸ್ತಿತ್ವದಲ್ಲಿರುವ ಘನೀಕೃತ ವೀರ್ಯ ಕೇಂದ್ರಿಗಳ ಬಲವರ್ಧನೆ (ರಾಜ್ಯವಲಯ)

ರಾಜ್ಯದಲ್ಲಿರುವ ವಿವಿಧ ಫಾರಂಗಳಲ್ಲಿನ ತಳಿಗಳ ವಿವರಗಳು.

ಫಾರ್ಮಗಳ ಹೆಸರು	ತಳಿಗಳ ಹೆಸರು	ತಳಿಗಳ ಸಂಖ್ಯೆ
1) ರಾಜ್ಯ ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಹೆಸರಘಟ್ಟ	1) ಜರ್ಸಿ	42
	2) ಕ್ರಾಸ್ ಬ್ರೀಡ್(ಮಿಶ್ರ ತಳಿ)	1
	3) ಸುರ್ತಿ	48
	4) ಆರ್‌ಡಿಆರ್‌ಎಸ್	36
	5) ಹೆಚ್.ಎಫ್.	-
2) ಜಾನುವಾರು ಸಂವರ್ಧನಾ ಕ್ಷೇತ್ರ ಹೆಸರಘಟ್ಟ	1) ಹೆಚ್.ಎಫ್ } }	98
	2) ಜರ್ಸಿ } }	
	3) ಹಳ್ಳಿಕಾರ } }	
	4) ಅಮೃತ್ ಮಹಲ್ }	
3) ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ ಧಾರವಾಡ	1) ಜರ್ಸಿ	19
	2) ಹೆಚ್.ಎಫ್	
	3) ಖಿಲಾರ ತಳಿ	
	4) ಸುರ್ತಿ, ಮುರಾ	
4) ಜಾನುವಾರು ಸಂವರ್ಧನಾ ತರಬೇತಿ ಕೇಂದ್ರ, ಕುಡಿಗೆ	ಜರ್ಸಿ	24
5) ಜಾನುವಾರು ಸಂವರ್ಧನಾ ಕ್ಷೇತ್ರ ಕ್ಯೂಲಾ	ಸುರ್ತಿ ಮಿಶ್ರ ತಳಿ	78

6)	ಅಮೃತ್ ಮಹಲ್ ತಳಿ ಸಂವರ್ಧನಾ ಕೇಂದ್ರ ಆಜ್ಜಂಪುರ	ಅಮೃತ್ ಮಹಲ್	1305
7)	ಹಳ್ಳಿಕಾರ್ ತಳಿ ಸಂವರ್ಧನಾ ಕೇಂದ್ರ ಕುಣಿಕೇನ ಹಳ್ಳಿ	ಹಳ್ಳಿಕಾರ್	134
8)	ಖಿಲಾರ ತಳಿ ಸಂವರ್ಧನಾ ಕೇಂದ್ರ ಬಂಕಾಪುರ	ಖಿಲಾರ	96
9)	ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಮುನಿರಾಬಾದ್	ಹೆಚ್.ಎಫ್, ಜರ್ಸಿ ದೇವಣಿ ಸುರ್ತಿ	35
10)	ಎಮ್ಮೆ ತಳಿ ಸಂವರ್ಧನಾ ಕೇಂದ್ರ ಕೇಂದ್ರ, ತೇಗೂರು	ಸೂರ್ತಿ	184
11)	ಜಾನುವಾರು ಸಂವರ್ಧನಾ ಕ್ಷೇತ್ರ, ಕುರಿಕುಪ್ಪೆ ಬಳ್ಳಾರಿ ಜಿಲ್ಲೆ	ಜಮನಪಾರಿ ಮೇಕೆ	130